ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

ಶ್ರೀ ಡಿ. ಎನ್. ಜೀವರಾವ್: ಮಾನ್ಯ ಅಧ್ಯಕ್ಷರೆ, ತಾವು ಪ್ರಕಟಣೆಯನ್ನು ಓದುತ್ತಿದ್ದೀರಿ, ಸದನದಲ್ಲಿ ಆಡಳಿತ ಪಕ್ಷದವರು ಯಾರೂ ಇಲ್ಲ.

ಅಧ್ಯಕ್ಷರು: ಒಂದು ನಿಮಿಷ ತಾಳಿ, ಈಗ ಒಂದು ಪ್ರಕಟಣೆ ಇದೆ.

1. ಪ್ರಕಟಣೆ:

ವಿಷಯ: ಮಾನ್ಯ ಶಾಸಕರಾದ ಶ್ರೀ ಹೆಚ್. ಎಸ್. ಪ್ರಕಾಶ್‌ರವರಿಗೆ ಪ್ರಸಕ್ತ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

ವಿಧಾನಸಭಾ ಸದಸ್ಯರಾದ ಶ್ರೀ ಹೆಚ್. ಎಸ್. ಪ್ರಕಾಶ್ ಇವರಿಗೆ ಶಸ್ತ್ರಚಿಕಿತ್ಸೆಯಾಗಿರುವ ಕಾರಣ ವಿಶ್ರಾಂತಿ ಪಡೆಯಲು ವೈದ್ಯರು ಸೂಚಿಸಿರುವ ಹಿನ್ನೆಲೆಯಲ್ಲಿ ಪ್ರಸಕ್ತ ನಡೆಯುತ್ತಿರುವ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ನೀಡಿರುತ್ತಾರೆ. ಮಾನ್ಯ ಸದಸ್ಯರು ಸದನಕ್ಕೆ ಪ್ರಸ್ತಾಪಿತ ಅವಧಿಯಲ್ಲಿ ಗೈರು ಹಾಜರಾಗಲು ಸದನದ ಸಹಮತಿ ಇದೆಯೆಂದು ಭಾವಿಸಲಾಗಿದೆ.

ಶ್ರೀ ಹೆಚ್. ಎಸ್. ಪ್ರಕಾಶ್‌ರವರ ಪ್ರಸಕ್ತ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: ಮಾನ್ಯ ಶಾಸಕರಾದ ಶ್ರೀ ಕಾಶಪ್ಪನವರ ವಿಜಯಾನಂದ ಶಿವಶಂಕರಪ್ಪ ಅವರು ಪೊಲೀಸ್‌ರ ಮೇಲೆ ಹಲ್ಲೇ ಮಾಡಿರುವ ಘಟನೆ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ನಡೆದಿರುವಂತಹ ಕೆಲವೊಂದು ಘಟನೆಗಳು, ಅದರಲ್ಲೂ ಈ ಸದನದ ಶಾಸಕರಾದ ಕಾಶಪ್ಪನವರ್ ವಿಜಯಾನಂದ ಶಿವಶಂಕರಪ್ಪ ಎನ್ನುವವರು ಪೊಲೀಸರ ಮೇಲೆ ಹಲ್ಲೆ ಮಾಡಿರುವಂತಹ ಘಟನೆ ಏನಿದೆ, ಬಹುಶಃ ನಾವೆಲ್ಲರೂ ಕೂಡ ತಲೆತಗ್ಗಿಸುವಂತಹ

ವಿಚಾರವಾಗಿದೆ. ನಿನ್ನೆ ಒಂದು ಘಟನೆಯಾಗಿದೆ. ಮೂವರು ಜನ ಯುವಕರನ್ನು ಕರೆದುಕೊಂಡು ಹೋಗಿ ಶ್ರೀ ಬೈರತಿ ಬಸವರಾಜ್‌ರವರು ಪೊಲೀಸರ ಮೇಲೆ ಹಲ್ಲೆ ಮಾಡಿರುವ ಘಟನೆಯಾಗಿದೆ. ಇದು ತಲೆ ತಗ್ಗಿಸುವಂತಹ ವಿಚಾರವಾಗಿದೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ಕೆಲಸವನ್ನು ಮಾಡೋಣ. ಇವತ್ತಿನ ಬೇಡಿಕೆಯ ಮೇಲೆ ಮಾನ್ಯ ಸಚಿವರ ಉತ್ತರ ಕೊಡುವುದು ಏನಿದೆ, ಅದು ಆಗಿಬಿಡಲಿ, ಉತ್ತರ ಆದ ನಂತರ ತಾವು ಹೇಳಿರುವ ಬಗ್ಗೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಶಾಸಕರಾದ ನಾವೆಲ್ಲರೂ ನಾಚಿಕೆ ಪಡುವಂತಹ ವಿಚಾರವಾಗಿದೆ. ರಾಜಕಾರಣಿಗಳ ಬಗ್ಗೆ, ಜನರು ಒಂದು ರೀತಿಯಾಗಿ ಮಾತನಾಡುವಂತಹ ಸಂದರ್ಭದಲ್ಲಿ ಈ ರೀತಿಯಾಗಿ ನಮ್ಮ ಶಾಸಕರೇ ಹೋಗಿ ಪೊಲೀಸರ ಮೇಲೆ ಹಲ್ಲೆ ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದರಿಂದ ಪೊಲೀಸರ ನೈತಿಕ ಸ್ಥೈರ್ಯವು ಹೋಗುತ್ತದೆ. ಮೊನ್ನೆ ದಿನ ನಾವು ಅದನ್ನೇ ಮಾತನಾಡಿದ್ದೇವೆ. ಆಡಳಿತ ಪಕ್ಷದ ಶಾಸಕರೆ ಈ ರೀತಿಯಾಗಿ ಮಾಡಿದರೆ ಹೇಗೆ?

ಶ್ರೀ ಡಿ. ಎನ್. ಜೀವರಾಜ್ : ಈ ಸದನದ ಹಿರಿಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಅವರು ಉತ್ತರವನ್ನು ಕೊಡಲಿ, ಆದರೆ ಅವರು ಉತ್ತರ ಕೊಡುತ್ತಿರುವಾಗ ಅವರ ಪಕ್ಷದವರೆ boycott ಮಾಡಿದ್ದಾರೆ. ಅವರ ಕಡೆಯವರನ್ನು ಸದನಕ್ಕೆ ಬರುವುದಕ್ಕೆ ಹೇಳಿ.

ಅಧ್ಯಕ್ಷರು: ಈಗ ಮಾನ್ಯ ಸಚಿವರು ಉತ್ತರ ಹೇಳಲಿ. ಆಮೇಲೆ ಇವತ್ತಿನ ಕಾರ್ಯಕ್ರಮ ಪ್ರಾರಂಭವಾಗುತ್ತದೆ.

ಶ್ರೀ ವೈ. ಎಸ್. ವಿ. ದತ್ತ: ಮಾನ್ಯ ಸಭಾಧ್ಯಕ್ಷರೆ, ನಾನು ಸದನದಲ್ಲಿ ಇದುವರೆಗೂ ಮಾತೇ ಆಡಿಲ್ಲ. ನಾನು ಜಿಲ್ಲಾ ಪಂಚಾಯಿತಿಗೆ ಸಂಬಂಧಿಸಿದಂತೆ. . . . .

ಅಧ್ಯಕ್ಷರು: ಬೇಡ, ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆ?

ಶ್ರೀ ವೈ.ಎಸ್. ವಿ. ದತ್ತ: ನಾನು ಮಾತನಾಡುವುದಿಲ್ಲ. ಎಲ್ಲೆಲ್ಲಿ ಏನಾಗಿದೆ ಎಂಬ ಬಗ್ಗೆ ಹೇಳುವುದಕ್ಕೆ ಒಂದೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಬೇಡ, No, ಈಗ deviate ಮಾಡುವುದಕ್ಕಾಗುವುದಿಲ್ಲ. ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ದಯವಿಟ್ಟು deviate ಮಾಡುವುದು ಬೇಡ. ಈಗಾಗಲೇ 38 ಜನರು ಮಾತನಾಡಿದ್ದಾರೆ. ಈಗ ತಮಗೆ ಅವಕಾಶ ಕೊಡುವುದಿಲ್ಲ. ಈಗ ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ಆಮೇಲೆ ಏನಾದರೂ ಇದ್ದರೆ ಕೇಳಿ.

ಶ್ರೀ ವೈ. ಎಸ್. ವಿ. ದತ್ತ: ಎರಡು ನಿಮಿಷ ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಬೇಡ, ಆಗುವುದಿಲ್ಲ, ಮಾನ್ಯ ಸಚಿವರೇ, ಉತ್ತರವನ್ನು ಹೇಳಿ.

3. 2014–15ನೇ ಸಾಲಿನ ಬೇಡಿಕೆ ಸಂಖ್ಯೆ: 07

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅನುದಾನ ಬೇಡಿಕೆಯ ಮೇಲೆ ನಡೆದ ಚರ್ಚೆಗೆ ಸರ್ಕಾರದ ಉತ್ತರ.

ಶ್ರೀ ಹೆಚ್. ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲಿಗೆ ನಾಲ್ಕು ದಿನಗಳ ಚರ್ಚೆಗೆ ತಾವು ಈ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ತಮಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇವತ್ತಿನ ನಮ್ಮ ಗ್ರಾಮೀಣಾ ಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ 38 ಜನ ಗೌರವಾನ್ವಿತ ಸದಸ್ಯರುಗಳು ಸುಮಾರು 13 ಗಂಟೆಗಳ ಕಾಲ ಚರ್ಚೆ ಮಾಡಿ ಮಾರ್ಗದರ್ಶನ ಮಾಡಿದ್ದಾರೆ. ಸಲಹೆ ಸೂಚನೆಗಳನ್ನು ಸಹ ಕೊಟ್ಟಿದ್ದಾರೆ. ಎಲ್ಲಿ ನಾವು ಎಡವಿದ್ದೇವೆಂದು